‘ನಾನು ಬರೆಯಲೇ ಬೇಕು’.

ಗರಿಮಾ ಅವರಿಗೆ ಯುದ್ಧದ ಕಾರಣಗಳ ಬಗ್ಗೆ ಸ್ಪಷ್ಟತೆ ಇದೆ. ಅವರು ಹೇಳುವ ಹಾಗೆ ಯುದ್ಧವು ಒಂದು ಉದ್ದಿಮೆ. ಬಲಿಷ್ಠ ರಾಷ್ಟ್ರಗಳ ಲಾಭಕ್ಕಾಗಿ ನಡೆಯುವ ಉದ್ದಿಮೆ. ಅಧಿಕಾರಕ್ಕಾಗಿ ಶ್ರೀಮಂತಿಕೆಗೆ ನಡೆಯುವ ಉದ್ದಿಮೆ. ಈ ಉದ್ದಿಮೆಯ ಇನ್ನೊಂದು ಹೊಸ ಸ್ವರೂಪವೆಂದರೆ ಯುದ್ಧಗಳ ಬಗ್ಗೆ ಸಂಶೋಧನೆ ಮಾಡಲು, ವರದಿ ಮಾಡಲು ಇದೇ ಶ್ರೀಮಂತ ರಾಷ್ಟ್ರಗಳು ಧನಸಹಾಯ, ಶಿಷ್ಯವೇತನ ನೀಡುತ್ತವೆ! ಕ್ರಮೇಣವಾಗಿ ಜಗತ್ತಿನ ಈ ಕರಾಳ ಪ್ರದೇಶಗಳು ಟೂರಿಸ್ಟ್ ಆಕರ್ಷಣೆಯ ಜಾಗಗಳಾಗಿ ಪರಿವರ್ತನೆಯಾಗುತ್ತವೆ! ಏಕೆಂದರೆ, ಹಿಂಸೆಗಳ ನೆನಪುಗಳಿಂದಲೂ ಆನಂದ ಪಡೆಯುವುದೂ ಒಂದು ಮನುಷ್ಯ ಪ್ರವೃತ್ತಿಯಲ್ಲವೆ? ಗರಿಮಾ ಕ್ರೊವೇಶಿಯಾಕ್ಕೆ ಬಂದಿದ್ದು ಶಿಕ್ಷಕಿಯಾಗಿ, ಯುದ್ಧದ ಸಂಶೋಧಕಿಯಾಗಿ ಅಲ್ಲ. ಹೀಗಾಗಿ ಈ ಕೃತಿ ಅವರ ಒಂದು Project ಅಲ್ಲ. ಪ್ರತಿಭಾ ನಂದಕುಮಾರ್ ಹೇಳುವಂತೆ, ‘ಗಂಡನಿಗೆ ಹೇಳಬೇಕೆಂದರೆ ಅವನಿಗೆ ಭಾಷೆಯಿಲ್ಲ’. ಹೀಗಾಗಿ ಈ ಕೃತಿಯಲ್ಲಿ ಮಹಿಳೆಯರು ಒಬ್ಬರಿಗೊಬ್ಬರು ಹೇಳಿಕೊಳ್ಳುವ ಅನುಭವಗಳಿರುವುದರಿಂದ ಈ ಕೃತಿಯ ಓದಿನ ಪರಿಣಾಮವೇ ಬೇರೆ. ಅಲ್ಲದೆ ಗರಿಮಾ ಬರೆದಿರುವುದು ಅವರ ದಿನಚರಿಯನ್ನು. ಅದರ ಭಾಗವಾಗಿ ಈ ಮಹಿಳೆಯರನ್ನು ಭೇಟಿಯಾಗಿದ್ದನ್ನು, ಅವರ ಕಥೆಗಳನ್ನು ಆಲಿಸಿದ್ದನ್ನು ದಾಖಲಿಸುತ್ತಾರೆ. ಹೀಗೆ ಕಥೆಗಳನ್ನು ಆಲಿಸುವುದನ್ನು, ಹೇಳುವವಳು ಕೇಳುವವಳು ಸಮಾನದುಃಖಿಗಳ ಹಾಗೆ ಅದನ್ನು ಅನುಭವಿಸುವುದನ್ನು ಮುಖ್ಯವೆಂದು ಪರಿಗಣಿಸಲಾಗದೆ ನಮ್ಮ ಸಮಾಜ ವಿಜ್ಞಾನಗಳು ಬರಡಾಗಿಬಿಟ್ಟಿವೆ.

ಗರಿಮಾ ನೆನಪಿಸಿಕೊಳ್ಳುವಂತೆ ಭಾರತದ ವಿಭಜನೆಯ ಸಂದರ್ಭದಲ್ಲೂ ಮಹಿಳೆಯರು ಇಂಥ ಹಿಂಸೆಯನ್ನೇ ಅನುಭವಿಸಿದ್ದರು. ವಿಭಜನೆಯ ನಿರಾಶ್ರಿತ ಕುಟುಂಬಕ್ಕೆ ಸೇರಿದ ಊರ್ವಶಿ ಭುತಾಲಿಯಾ ಅವರು ಕೂಡ ಹೀಗೆಯೇ ಆಲಿಸಿ ಅನುಭವಿಸಿ ಬರೆದ ‘The Other Side of Silence’ ಕೃತಿಯು ಇಂದಿಗೂ ವಿಭಜನೆಯ ಬಗೆಗಿನ ಅತ್ಯಂತ ಪ್ರಭಾವಿ ಕೃತಿಯಾಗಿದೆ.

ಈ ಕೃತಿಯ ಉದ್ದಕ್ಕೂ ಅನೇಕ ಪದ್ಯಗಳು ನಿರೂಪಣೆಯಲ್ಲಿ ಸೇರಿಕೊಂಡಿವೆ. ಅಗಾಧವಾದ ಆಳದಿಂದ ಇಂಥ ಅನುಭವಗಳನ್ನು ಈ ಪದ್ಯಗಳು ಕಟ್ಟಿಕೊಟ್ಟಿವೆ. ಅವರ ಮೆಚ್ಚಿನ ಕವಿ ಕುಮಾರ್ ಅಂಬುಜ್ ಅವರ ಪದ್ಯದ ಕೆಲವು ಸಾಲುಗಳು ಹೀಗಿವೆ:

ಕ್ರೌರ್ಯ ಈಗ ಸಂಸ್ಕೃತಿಯಾಗಿ ಬಂದಿದೆ.
ಇದಕ್ಕೀಗ ಯಾರ ವಿರೋಧವಿಲ್ಲ.
ಈಗ ಉಳಿದಿರುವುದೇನೆಂದರೆ ಕ್ರೌರ್ಯವನ್ನು
ಇನ್ನಷ್ಟು ಸುಸಂಸ್ಕೃತಗೊಳಿಸುವುದು.
ಕರುಣೆಯನ್ನು ನಾಶಗೊಳಿಸುವುದು.

ಎಲ್ಲೋ ಮತ್ತೆ ಅದೇ ಪ್ರಶ್ನೆಗೆ ವಾಪಸ್ಸಾಗುತ್ತೇನೆ. ಯಾಕೆ ಇದೆಲ್ಲ ಬರೆಯಬೇಕು? ಯಾರಿಗೆ ಪ್ರಯೋಜನ? ಯಾರು ಇದರಿಂದ ಬದಲಾಗುತ್ತಾರೆ? ಈ ಪ್ರಶ್ನೆಗಳಿಗೆ ಉತ್ತರಗಳಿರಲಿಕ್ಕಿಲ್ಲ. ಆದರೆ ಬರೆಯುವಾಗ ಉತ್ತರ ಸಿಕ್ಕಬಹುದೆಂಬ ನಂಬಿಕೆಯಿಂದ ಬರೆಯಬೇಕು.

ಕೊನೆಯದಾಗಿ ನನ್ನದೊಂದು ಅನುಭವ. ಹತ್ತಾರು ವರ್ಷಗಳ ಹಿಂದೆ ನಾನು ಇಸ್ರೇಲ್‌ನ ಜೆರುಸಲೇಮ್‌ನಲ್ಲಿರುವ ‘ಯಾದ ವಶೀಮ್’ ಸಂಶೋಧನಾ ಕೇಂದ್ರದಲ್ಲಿ ಇತರ ಭಾರತೀಯ ಪ್ರತಿನಿಧಿಗಳೊಂದಿಗೆ ಒಂದು ವಾರದ ವರ್ಕ್‌ಶಾಪ್‌ನಲ್ಲಿ ಭಾಗವಹಿಸಿದೆ. ಅಲ್ಲಿಯ ಪ್ರಸಿದ್ಧ ಸಂಗ್ರಹಾಲಯದಲ್ಲಿ ನೀವು ಮೊದಲು ಕಾಣುವುದು ಪುಟ್ಟ ಮಕ್ಕಳ ಅನಾಥ ಚಪ್ಪಲಿಗಳು; ಕೊಲೆಯಾದ, ವಿಷಪೂರಿತ ಚಾಕಲೇಟ್ ತಿನ್ನಿಸಿ ಕೊಂದ, ಉಸಿರುಗಟ್ಟಿ ಸಾಯಿಸಿದ ಪುಟ್ಟ ಮಕ್ಕಳ ತಬ್ಬಲಿ ಚಪ್ಪಲಿಗಳು ಇವು. ಜರ್ಮನ್ನರು ಕೊಂದ ಯಹೂದಿ ಮಕ್ಕಳ ಚಪ್ಪಲಿಗಳು. ಅಲ್ಲಿ ನಿಂತರೆ ಅಳುವುದನ್ನು ಬಿಟ್ಟು ಏನೂ ಮಾಡಲಾರಿರಿ. ಆದರೆ ಈಗ? ಇದೇ ಇಸ್ರೇಲಿ ರಾಷ್ಟ್ರ ಪ್ಯಾಲೆಸ್ಟೈನ್‌ನಲ್ಲಿ 7000ಕ್ಕೂ ಹೆಚ್ಚು ಮಕ್ಕಳನ್ನು ಕೊಂದಿದೆ. ಆ ಮಕ್ಕಳ ಅನಾಥ ಚಪ್ಪಲಿಗಳ ಇನ್ನೊಂದು ಸಂಗ್ರಹಾಲಯ ಸ್ಥಾಪನೆಯಾಗಬಹುದು.

ರಾಷ್ಟ್ರಗಳು ಇರುವವರೆಗೆ ಯುದ್ಧಗಳಿರುತ್ತವೆ. ಅನಾಥ ಚಪ್ಪಲಿಗಳ ಅನಾಮಿಕ ತಾಯಿಯರು ಇರುತ್ತಾರೆ. ಗರಿಮಾರಂಥ ‘ಕೇಳುಗಳು’ ಸಿಕ್ಕಾಗ ತಮ್ಮ ಕಥೆ ಹೇಳಿಕೊಳ್ಳುತ್ತಾರೆ. ಎಲ್ಲರೂ ವಿಭಜನೆಯ ಸಂತ್ರಸ್ತ ಮಹಿಳೆಯರು; ಗುಜರಾತ್‌ನ ಮಹಿಳೆಯರು; ಮಣಿಪುರದ ಮಹಿಳೆಯರು, ಹೀಗೆ...

●